ಅಟೋಮ್ಯಾಟಿಕ್ ಆಗಿ ಕಾರ್ಯ ನಿರ್ವಹಿಸುತ್ತವೆ. ಕ್ಯಾಮೆರಾದ ಜೊತೆಯಲ್ಲಿ 'ಇನ್‌ಫ್ರಾರೆಡ್ (ಅವಗೆಂಪು) ಬೀಮ್' ಉಪಕರಣವೂ ಇರುತ್ತದೆ. ಇದರಿಂದ ಕಣ್ಣಿಗೆ ಕಾಣದ ಬೆಳಕಿನ ಕಿರಣವೊಂದು ಹೊರ ಸೂಸುತ್ತಿರುತ್ತದೆ. ಹುಲಿ ಈ ಹಾದಿಯಲ್ಲಿ ಬಂದಾಗ, ಅದು ಕತ್ತರಿಸಲ್ಪಟ್ಟು ಕ್ಯಾಮೆರಾ 'ಕ್ಲಿಕ್' ಆಗುವಂತೆ ಮಾಡುತ್ತದೆ. ಇದರಿಂದ ಹುಲಿ ತನ್ನ ಫೋಟೋವನ್ನು ತಾನೇ ತೆಗೆದುಕೊಳ್ಳುತ್ತದೆ. ಆ ನಂತರ ಕ್ಯಾಮೆರಾದಿಂದ ತೆಗೆದ ಹುಲಿಯ ಚಿತ್ರಗಳನ್ನು ಅಧ್ಯಯನ ಮಾಡುತ್ತಾರೆ.

ಪ್ರತಿಯೊಬ್ಬ ಮನುಷ್ಯನಿಗೂ ತನ್ನದೇ ಆದ ಬೆರಳಚ್ಚು ಇರುವಂತೆ, ಪ್ರತಿ ಹುಲಿಯ ಮೈ ಮೇಲಿನ ಪಟ್ಟೆಯ ವಿನ್ಯಾಸದಲ್ಲಿ ವ್ಯತ್ಯಾಸವಿರುತ್ತದೆ. ವನ್ಯಜೀವಿ ಪರಿಣತರು ಈ ವಿನ್ಯಾಸವನ್ನು ಅಧ್ಯಯನ ಮಾಡಿ ಹುಲಿಗಳ ಸಂಖ್ಯೆಯನ್ನು ಲೆಕ್ಕ ಹಾಕುತ್ತಾರೆ. (ಇದಕ್ಕೂ ಮೊದಲು ಹುಲಿಯ ಹಿಕ್ಕೆ, ಹೆಜ್ಜೆ ಗುರುತುಗಳ ಆಧಾರದಿಂದ ಹುಲಿ ಗಣತಿಯನ್ನು ಮಾಡುತ್ತಿದ್ದರು. ಭಾರತದಲ್ಲಿ ಈ ಕ್ಯಾಮೆರಾ ಟ್ರ್ಯಾಪಿಂಗ್ ವಿಧಾನವನ್ನು ವ್ಯಾಪಕವಾಗಿ ಬಳಕೆಗೆ ತಂದವರು ಅಂತರಾಷ್ಟ್ರೀಯ ಖ್ಯಾತಿಯ ಹುಲಿ ವಿಜ್ಞಾನಿ ಡಾ.ಕೆ.ಉಲ್ಲಾಸ ಕಾರಂತರು). ಈಗಾಗಲೇ ತಿಳಿಸಿದಂತೆ ಈ ಬಾರಿಯ ಗಣತಿಯಲ್ಲಿ ಈ ಕ್ಯಾಮೆರಾ ಟ್ರ್ಯಾಪ್ ಸ್ಯಾಂಪಲಿಂಗ್ ವಿಧಾನವನ್ನೇ ಬಳಸಲಾಗಿತ್ತು. ಕೇಂದ್ರ ಸರಕಾರದ ವರದಿಯ ಪ್ರಕಾರ, ವಿಶ್ವದ ಯಾವುದೇ ದೇಶದಲ್ಲಿ ಇಷ್ಟೊಂದು ಅಧಿಕ ಸಂಖ್ಯೆಯ ಹುಲಿಯ ಚಿತ್ರಗಳನ್ನು ಸೆರೆ ಹಿಡಿಯಲಾಗಿಲ್ಲ. ವಿಶ್ವದ ಹುಲಿಗಳ ಪೈಕಿ ಶೇಕಡಾ 70 ರಷ್ಟು ಹುಲಿಗಳು ಭಾರತದಲ್ಲಿಯೇ ಇವೆ. ಭಾರತದಲ್ಲಿ, ಕರ್ನಾಟಕದಲ್ಲಿಯೇ ಅತ್ಯಧಿಕ ಸಂಖ್ಯೆಯ (406) ಹುಲಿಗಳು ಇರುವುದು ಈ ಗಣತಿಯಿಂದ ತಿಳಿದು ಬಂದಿದೆ.

ಹೆಚ್ಚಾದ ಈ ಹುಲಿಗಳ ಸಂಖ್ಯೆ ಹೇಳುವುದು ಏನನ್ನು? ಹುಲಿಗಳ ಸಂಖ್ಯೆ ಹೆಚ್ಚಾಗಿದೆ ಎನ್ನುವುದು ಈ ಕೆಳಗಿನ ಅಂಶಗಳನ್ನು ಸಂಕೇತಿಸುತ್ತದೆ.

★ ಸಂರಕ್ಷಣೆಯಲ್ಲಿ ಅನುಸರಿಸಿರುವ ಕ್ರಮಗಳು.
★ ಕಳ್ಳ ಬೇಟೆಯ ನಿಯಂತ್ರಣ.
★ ಬಲಿ ಪ್ರಾಣಿಗಳ ಸಂಖ್ಯೆಯ ಏರಿಕೆ.
★ ಹುಲಿಗಳ ಆವಾಸದ ರಕ್ಷಣೆ.
★ ಕಾಡಿನಂಚಿನ ಜನರಲ್ಲಿರುವ ಜಾಗೃತಿ.

ಕರ್ನಾಟಕದಲ್ಲಿ ಹುಲಿ ಸಂರಕ್ಷಣಾ ಯೋಜನೆ ಆರಂಭವಾದಾಗಿನಿಂದ ಹುಲಿಯ ಸಂರಕ್ಷಣೆಯಲ್ಲಿ ಸರಕಾರದ ಜೊತೆಯಲ್ಲಿ ಹಲವಾರು ಸರ್ಕಾರೇತರ ಮತ್ತು ಸ್ವಯಂ ಸೇವಾ ಸಂಘ ಸಂಸ್ಥೆಗಳು ಭಾಗವಹಿಸುತ್ತಾ ಬಂದಿವೆ. ವನ್ಯಜೀವಿ ಸಂರಕ್ಷಣಾ ಕಾನೂನಿನ ಸರಿಯಾದ ಅಳವಡಿಕೆ, ನಿಷ್ಠಾವಂತ ಅಧಿಕಾರಿಗಳ ಸೇವೆಯ ಕೊಡುಗೆ ಅಧಿಕವಾಗಿದೆ.

ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿದ್ದ ಹುಲಿಯ ಬೇಟೆಯಲ್ಲಿ ಆಧುನಿಕ ಶಸ್ತ್ರಾಸ್ತ್ರಗಳು ಮದ್ದು ಗುಂಡುಗಳು ಹುಲಿಯ ವಿರುದ್ಧ ಮನುಷ್ಯ



ಚಿತ್ರ: ಎಚ್.ಸತೀಶ್

ಮತ್ತಷ್ಟು ಬಲಶಾಲಿಯಾಗುವಂತೆ ಮಾಡಿದ್ದವು. ವಿದ್ಯುಚ್ಛಕ್ತಿ, ವಿಷ, ಕೇಬಲ್‌ಗಳು ಮತ್ತು ಸ್ಪ್ರಿಂಗ್‌ಗಳಂತಹ ಉಕ್ಕಿನ ವಸ್ತುಗಳು ಕಳ್ಳ ಬೇಟೆಯನ್ನು ಸುಲಭ ಸಾಧ್ಯವಾಗಿಸಿದವು. ಹುಲಿಯ ಚರ್ಮ, ಉಗುರು, ಹಲ್ಲು, ಮೂಳೆ, ಮಾಂಸಗಳಿಗಾಗಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇದ್ದ ಬೇಡಿಕೆಯ ಜೊತೆಗೆ, ಅರಣ್ಯ ವಾಸಿಗಳಿಗೆ ಅರಣ್ಯದಲ್ಲಿನ ಉತ್ಪನ್ನಗಳು ದೊರೆಯದಂತಾದಾಗ ಇದು ಮತ್ತೂ ತೀವ್ರವಾಯಿತು. ಹುಲಿಯ ಕುರಿತು ಪ್ರಪಂಚದ ಬಹುತೇಕ ಜನರು ಸಾಂಪ್ರದಾಯಿಕವಾಗಿ ಹೊಂದಿರುವ ಹಲವು ನಂಬಿಕೆಗಳೂ ಹುಲಿಗೆ ಮಾರಕವಾಗಿವೆ. ಹುಲಿಯ ಮೂಳೆಗಳಿಗಿರುವ ಸಂಧಿವಾತವನ್ನು ಗುಣಪಡಿಸುವ ಗುಣ, ಹುಲಿಯ ರಕ್ತದ ಶಕ್ತಿ, ಹುಲಿಯ ಬಾಲದಲ್ಲಿರುವ ಚರ್ಮ ರೋಗಗಳನ್ನು ಗುಣಪಡಿಸುವ ಶಕ್ತಿ, ಕಣ್ಣನ್ನು ತಿನ್ನುವುದರಿಂದ ಕಣ್ಣಿನ ಪೊರೆ ನಾಶವಾಗುವುದು, ಉಗುರು, ಹಲ್ಲುಗಳು




ಶ್ರೀ ಪಂಚಮುಖಿ ಜ್ಯೋತಿಷ್ಯಂ

INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಶಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು-18.

ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಬೆಂಗಳೂರು ಮೈಸೂರು 9880444450

